ಸಿಂಧ್ಯಾರವರಿದ್ದಾರೆ, ವಿರೋಧ ಪಕ್ಷದ ನಾಯಕರಾದ ಜಗದೀಶ್‌ಶೆಟ್ಟರ್‌ರವರೆಲ್ಲರನ್ನು ಕೂರಿಸಿ ಮಾತನಾಡಿ ಒಂದು ತೀರ್ಮಾನ ತೆಗೆದುಕೊಳ್ಳಬಹುದು.

ಅಧ್ಯಕ್ಷರು :- ಮಾನ್ಯ ಖರ್ಗೆಯವರೆ, ಮಾನ್ಯ ಸಿಂಧ್ಯಾರವರು ಹೇಳಿದಂತೆ ನಾನು ತಾಯಿಯ ಹಾಗೆಯೇ ಆಕ್ಟ್ ಮಾಡುತ್ತೇನೆ, ತಾವು ದಯವಿಟ್ಟು ತಮ್ಮ ಅಭಿಪ್ರಾಯವನ್ನು ಹೇಳಿ. ತಾಯಿಯ ಆಕ್ಟ್ ಎಂದು ಅಲ್ಲ, ತಾವು ಹೇಳಿದಂತೆ ಅನುಸರಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ತಪ್ಪು ಮಾಡಿದಾಗ ತಾವು ಯಾವಾಗಲೂ ತಾಯಿಯ ಸ್ವರೂಪದಲ್ಲಿ ಕ್ಷಮಿಸಬಹುದು. ಆದರೆ ಕೆಲವು ಸಲ ನಿರ್ಣಯ ತೆಗೆದುಕೊಳ್ಳಬೇಕಾದರೆ, ಅಥವಾ ಸರಿಪಡಿಸಬೇಕು, ಶಿಸ್ತನ್ನು ಕಾಪಾಡಬೇಕು ಎಂದರೆ ಸ್ವಲ್ಪ ತಂದೆಯ ಸ್ವರೂಪವೂ ಬೇಕಾಗುತ್ತದೆ. ಅದಕ್ಕಾಗಿ ಇವೆರಡರ ಮಧ್ಯದಲ್ಲಿ ನಾವೆಲ್ಲರೂ ತಮ್ಮ ಕೊಠಡಿಗೆ ಹೋಗಿ ಮಾತನಾಡೋಣ.

ಅಧ್ಯಕ್ಷರು :- ಆಗಲಿ, ಈಗ ಸದನವನ್ನು ಐದು ನಿಮಿಷ ಮುಂದೂಡೋಣ.

(ಸದನವು 3.15ಕ್ಕೆ ಮುಂದೂಡಲ್ಪಟ್ಟು ಮತ್ತೆ ಐದು ನಿಮಿಷಗಳ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

ವಿಷಯ :- ಔಷಧ ನಿಯಂತ್ರಣ ಕಛೇರಿ ಮೇಲೆ ಲೋಕಾಯುಕ್ತ ಧಾಳಿ ಬಗ್ಗೆ

(ಸದನವು ಪುನಃ 4-10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಶ್ರೀ ಎ.ವಿ. ವೆಂಕಟಪ್ಪ ನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

(ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು).

ಅಧ್ಯಕ್ಷರು :- ತಿಮ್ಮಪ್ಪನವರೇ, ತಾವು ಸರ್ಕಾರದ ಪರವಾಗಿ ಏನಾದರೂ ಹೇಳಿಕೆ ಕೊಡುವುದು ಇದೆಯೇ?

+ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಧ್ಯಂತರ ವರದಿಯನ್ನು ತತ್‌ಕ್ಷಣ ಸಲ್ಲಿಸಿ ಎಂದು ಈಗಾಗಲೇ ಲೋಕಾಯುಕ್ತಕ್ಕೆ ನಾವು ವಿನಂತಿ ಮಾಡಿಕೊಂಡಿದ್ದೇವೆ. ಆ ವರದಿ ಬಂದಾದಮೇಲೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನತಕ್ಕಂಥದ್ದನ್ನು ಕೂಡ ನಾವು ತೀರ್ಮಾನ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಡ್ರಗ್ಸ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ ಕಾರ್ಯವೈಖರಿಯಲ್ಲಿ ನಡೆದಿರತಕ್ಕಂಥ ವ್ಯವಸ್ಥೆ ಅವ್ಯವಸ್ಥೆ ಬಗ್ಗೆ ತನಿಖೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗಾಗಲೇ ಈ ವಿಷಯ ಲೋಕಾಯುಕ್ತದ ಮುಂದೆ ಇದೆ ಮತ್ತು ಅದರ ಮಧ್ಯಂತರ ವರದಿ ಕೂಡ ಬರಬೇಕು. ಆದರೂ ಅವರ ಸಂಶಯವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಮಧ್ಯಂತರ ವರದಿ ಬಂದಾದ ಮೇಲೆ ಯಾವ ರೀತಿಯಾದ ತನಿಖೆಯನ್ನು ಮಾಡುವುದಕ್ಕೆ ಸಾಧ್ಯ ಕಾನೂನಿನ ಚೌಕಟ್ಟಿನಲ್ಲಿ ಎನ್ನುವುದನ್ನು ನಾನು ಕಾನೂನು ಇಲಾಖೆಯವರ ಜೊತೆ ಸಮಾಲೋಚನೆ ಮಾಡಿ ಲೋಕಾಯುಕ್ತ ವಿಚಾರಣೆಗೆ ಯಾವುದೇ ಬಾಧಕವೂ ಬರದಿದ್ದ ಹಾಗೆ ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ಸಂಪೂರ್ಣ ಪರಿಗಣನೆಗೆ ತೆಗೆದುಕೊಂಡು ಸೂಕ್ತವಾದಂಥ ವಿಚಾರಣೆಯನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಒಟ್ಟಿನಲ್ಲಿ ಕಾನೂನಿನ ಚೌಕಟ್ಟಿನ ಮೇಲೆಯೇ ನಾವು ತೀರ್ಮಾನ ಮಾಡಬೇಕಾಗುತ್ತದೆ. ಕಾನೂನು ಇಲಾಖೆಯ ಸಲಹೆಯನ್ನು ಸಹ ನಾವು